ದಿನಾಂಕ:17-11-2020ರಂದು ಬೆಳಿಗ್ಗೆ 11.00ಗಂಟೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರು ಇವರ ವತಿಯಿಂದ ಶ್ರೀ ಜಯಪ್ರಕಾಶ ಹಿತ್ತಲ್ ಇವರು ಸರ್ವೆ ನಂ 28 ಮತ್ತು 23/2, ಮರಕಲ್ ಗ್ರಾಮ, ತಾ|| ಶಹಾಪೂರ ಜಿ|| ಯಾದಗಿರಿ ಇವರ ಒಟ್ಟು 22.11 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 80,800 ಟನ್ ಸಾಮರ್ಥ್ಯದ ಮರಳು ಗಣಿಗಾರಿಕೆ ಯೋಜನೆಗೆ ಸಂಬಂಧಿಸಿದಂತೆ ಪರಿಸರದ ಮೇಲೆ ಆಗುವ ಪರಿಣಾಮಗಳ ಕುರಿತು ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲು ಮಾನ್ಯ ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ ಯಾದಗಿರಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಪರಿಸರ ಸಾರ್ವಜನಿಕ ಆಲಿಕ ಸಭೆಯ ನಡುವಳಿಗಳು :

<u>ಹಾಜರಿದ್ದ ಅಧಿಕಾರಿಗಳು :</u>

ಶ್ರೀಯುತರು :

1) ಡಾ|| ರಾಗಪ್ರಿಯ. ಆರ್, ಭಾ.ಆ.ಸೇ.
ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಪರಿಸರ ಸಾರ್ವಜನಿಕ ಆಲಿಕೆ ಸಭೆ
ಯಾದಗಿರಿ ಜಿಲ್ಲೆ, ಯಾದಗಿರಿ.

2) ಶ್ರೀ. ಎಂ. ಎ. ಮಣಿಯಾರ,
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರಿನ ಪ್ರತಿನಿಧಿ ಹಾಗೂ ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಛೇರಿ, ಕಲಬುರಗಿ.

3) ಶ್ರೀ. ಸಣ್ಣವೆಂಕಟೇಶ ಸನಬಾಳ,
ಪರಿಸರ ಅಧಿಕಾರಿಗಳು (ಪ್ರಭಾರ),
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಯಾದಗಿರಿ.

4) ಶ್ರೀ ಜಗನ್ನಾಥ, ತಹಶೀಲ್ದಾರರು, ಶಹಾಪೂರ.

ಸಭೆಯ ಪ್ರಾರಂಭದಲ್ಲಿ ಶ್ರೀ ಸಣ್ಣವೆಂಕಟೇಶ ಸನಬಾಳ, ಪರಿಸರ ಅಧಿಕಾರಿಗಳು (ಪ್ರಭಾರ), ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ ಇವರು ಮಾನ್ಯ ಜಿಲ್ಲಾಧಿಕಾರಿಗಳು, ಯಾದಗಿರಿ ಇವರನ್ನು ಸದರಿ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ವಿನಂತಿಸುತ್ತಾ ಸದರಿ ಸಭೆಗೆ ಆಗಮಿಸಿದ ಮಂಡಳಿಯ ಹಿರಿಯ ಪರಿಸರ ಅಧಿಕಾರಿಗಳು, ಕಲಬುರಗಿ, ಸ್ಥಳೀಯ ಆಡಳಿತ ವಿಭಾಗದ ಸಿಬ್ಬಂದಿಗಳಿಗೆ, ಪೋಲಿಸ್ ಇಲಾಖಾ ಅಧಿಕಾರಿಗಳಿಗೆ, ಆರೋಗ್ಯ ಇಲಾಖೆ ಸಿಬ್ಬಂದಿಯವರಿಗೆ ಮತ್ತು ಸದರಿ ಯೋಜನೆಯ ಎಲ್ಲಾ ತಾಂತ್ರಿಕ ಸಿಬ್ಬಂದಿಗಳಿಗೆ, ಮಾದ್ಯಮದವರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಸ್ವಾಗತವನ್ನು ಕೋರಿದರು.

ಶ್ರೀ ಸಣ್ಣವೆಂಕಟೇಶ ಸನಬಾಳ, ಪರಿಸರ ಅಧಿಕಾರಿಗಳು (ಪ್ರಭಾರ), ಇವರು ಸಭೆಯಲ್ಲಿ ಮಾತನಾಡುತ್ತಾ ದಿ: 17-11-2020 ರಂದು ಸರ್ವೆ ನಂ 28 ಮತ್ತು 23/2, ಮರಕಲ್ ಗ್ರಾಮ, ತಾ|| ಶಹಾಪೂರ ಜಿ|| ಯಾದಗಿರಿಯಲ್ಲಿ ಉದ್ದೇಶಿತ ಒಟ್ಟು 22.11 ಎಕರೆ ಪ್ರದೇಸದಲ್ಲಿ ಶ್ರೀ ಜಯಪ್ರಕಾಶ ಹಿತ್ತಲ್ ಇವರು ಪ್ರತಿ ವರ್ಷಕ್ಕೆ 80,800 ಟನ್ ಸಾಮರ್ಥ್ಯದ ಸಾದಾರಣ ಮರಳು ಗಣಿಗಾರಿಕೆಯ ಯೋಜನೆಯು ಭಾರತ ಸರ್ಕಾರದ ಪರಿಸರ ಅಘಾತ ಅಧ್ಯಾಯನ ಅಧಿಸೂಚನೆ

ಸಂಖ್ಯೆ S.O. 1533 (E) ದಿನಾಂಕ 14-09-2006(ತಿದ್ದುಪಡಿ ದಿನಾಂಕ:01-12-2009)ರ ಪ್ರಕಾರ ಸಾರ್ವಜನಿಕ ಅಹವಾಲುಗಳನ್ನು ಮತ್ತು ಸಲಹೆಗಳನ್ನು ಸ್ವೀಕರಿಸುವುದು ಕಡ್ಡಾಯವಾಗಿರುವುದರಿಂದ ಸದರಿ ಪರಿಸರ ಕುರಿತಾದ ಸಾರ್ವಜನಿಕ ಆಲಿಕೆ ಸಭೆಯನ್ನು ಆಯೋಜಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು ಹಾಗೂ ಸದರಿ ಯೋಜನೆಯಿಂದ ಪರಿಸರದ ಮೇಲಾಗುವ ಪರಿಣಾಮಗಳ ಬಗ್ಗೆ ಮತ್ತು ಸಂಬಂಧಿಸಿದ ಸಾರ್ವಜನಿಕರಿಂದ ಅಹವಾಲುಗಳನ್ನು ಮತ್ತು ಸಲಹೆಗಳನ್ನು ಸ್ವೀಕರಿಸಲು ಸಭೆಯನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಭಾರತ ಸರ್ಕಾರದ ಪರಿಸರ ಅಘಾತ ಅಧ್ಯಾಯನ ಅಧಿಸೂಚನೆ ಸಂಖ್ಯೆ S.O. 1533 (E) ದಿನಾಂಕ 14-09-2006(ತಿದ್ದುಪಡಿ ದಿನಾಂಕ:01-12-2009)ರಲ್ಲಿ ಆದೇಶಿಸಿರುವಂತೆ ಯಾದಗಿರಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿ, ಯಾದಗಿರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ ಜಿಲ್ಲಾ ಪಂಚಾಯತ್, ಯಾದಗಿರಿ, ಜಿಲ್ಲಾ ಕೈಗಾರಿಕಾ ಕೇಂದ್ರ ಯಾದಗಿರಿ, ನಗರಸಭೆ ಶಹಾಪೂರ, ಗ್ರಾಮ ಪಂಚಾಯತಿ ಕಾರ್ಯಾಲಯ, ಮರಕಲ್ (ಎಂ) ಹಾಗೂ ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ ಇವರುಗಳ ಕಾರ್ಯಾಲಯದಲ್ಲಿ ಯೋಜನೆಯ ಕಾರ್ಯಕಾರಿ ಸಾರಾಂಶ (ಕನ್ನಡ ಮತ್ತು ಆಂಗ್ಲ ಮಾಧ್ಯಮ) ಹಾಗೂ ಅಡಕ ಮುದ್ರಿಕೆಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ ಒದಗಿಸಲಾಗಿತ್ತು ಹಾಗೂ ಸದರಿ ಯೋಜನೆಗೆ ಸಂಬಂಧಿಸಿದಂತೆ ಸಲಹೆ/ಸೂಚನೆ/ದೂರು ಇತ್ಯಾಧಿಗಳನ್ನು ಇ-ಮೇಲ್/ವ್ಯಯಕ್ತಿಕ ಮೂಲಕ ಮೇಲ್ಕಾಣಿಸಿದ ಇಲಾಖೆಗಳಿಗೆ ಸಲ್ಲಿಸುವಂತೆ ಕೋರಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಅಧಿಸೂಚನೆಯನ್ನು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ "ವಿಜಯ ಕರ್ನಾಟಕ ಮತ್ತು ದಿ ಹಿಂದೂ"ಗಳಲ್ಲಿ ದಿ:16-10-2020ರಂದು ಹಾಗೂ ಸ್ಥಳೀಯ ದಿನ ಪತ್ರಿಕೆಯಾದ "ಪ್ರಜಾವಾಣಿ"ಯಲ್ಲಿ ದಿ:18-10-2020ರಂದು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ. ಅದರಂತೆ ದಿ:17-11-2020ರಂದು ಸದರಿ ಸಭೆಯಲ್ಲಿ ಗ್ರಾಮಸ್ಥರು ತಮ್ಮ ಅಭಿಪ್ರಾಯಗಳನ್ನು/ಅಹವಾಲುಗಳನ್ನು ಮಾನ್ಯ ಅಧ್ಯಕ್ಷರಲ್ಲಿ ಮುಕ್ತವಾಗಿ ಮೌಖಿಕವಾಗಿಯಾಗಲಿ ಅಥವಾ ಲಿಖಿತ ರೂಪದಲ್ಲಾಗಲಿ ಸಲ್ಲಿಸಬಹುದಾಗಿದೆ ಎಂದು ತಿಳಿಸುತ್ತಾ ಸಭೆಯನ್ನು ಜರುಗಿಸಲು ಅನುಮತಿಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿದರು.

ಸಭೆಯ ಆಧ್ಯಕ್ಷರ ಅನುಮತಿಯ ಮೇರೆಗೆ ಸದರಿ ಸಭೆಯಲ್ಲಿ ಯೋಜನೆಯ ಕುರಿತು ಮಾಹಿತಿಯನ್ನು ವಿವರಿಸುವಂತೆ ಯೋಜನೆಯ ಸಲಹೆಗಾರರಿಗೆ ತಿಳಿಸಲಾಯಿತು.

ಸದರಿ ಯೋಜನೆಗೆ ಸಂಬಂಧಿಸಿದಂತೆ ವಿಸ್ತೃತವಾಗಿ ಸಿದ್ಧಪಡಿಸಲಾದ ವರದಿಯನ್ನು ಯೋಜನೆಯ ಸಲಹೆಗಾರರು ಸಭೆಯಲ್ಲಿ ಮಂಡಿಸಿದರು.

ಸಭಾಧ್ಯಕ್ಷರು ಮಾತನಾಡುತ್ತಾ ಸಾರ್ವಜನಿಕರಲ್ಲಿ ಏನಾದರೂ ಸಲಹೆ, ಸೂಚನೆ, ಟಿಕೆ-ಟಿಪ್ಪಣಿ/ಅಹವಾಲುಗಳು ಇದ್ದಲ್ಲಿ ಮುಕ್ತವಾಗಿ ಲಿಖಿತ ರೂಪದಲ್ಲಾಗಲಿ ಅಥವಾ ಮೌಖಿಕವಾಗಿಯಾಗಲಿ ಸಭೆಗೆ ಮಂಡಿಸುವಂತೆ ಹಾಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುವಂತೆ ಸೂಚಿಸಿದರು. ಅದರಂತೆ ಸಭೆಯಲ್ಲಿ ಹಾಜರಿದ್ದ ಗ್ರಾಮಸ್ಥರು ತಮ್ಮ ಅಭಿಪ್ರಾಯಗಳನ್ನು ಈ ಕೆಳಗಿನಂತೆ ವ್ಯಕ್ತ ಪಡಿಸಿದರು.

(1) **ಶ್ರೀ ಹನುಮಂತ ಬಂಗಿ, ಸಾಮಾಜಿಕ ಕಾರ್ಯಕರ್ತ, ಸಾ॥ ಕೊಳೂರು ಎಂ.:-**

ಇವರು ಮಾತನಾಡುತ್ತಾ ಮರಳು ಗುತ್ತಿಗೆದಾರರು ಪಟ್ಟಾ ಜಮೀನಿನಲ್ಲಿ ರಾಯಲ್ಟಿಯನ್ನು ಪಡೆದುಕೊಂಡು ದುರುಪಯೋಗಪಡಿಸಿಕೊಂಡು ಹಾಗೂ ಪಕ್ಕದ ರಾಯಚೂರು ಜಿಲ್ಲೆ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಮರಳನ್ನು ಅಕ್ರಮವಾಗಿ ಸಂಗ್ರಹಿಸಿ ಮತ್ತು ಅಕ್ರಮವಾಗಿ ಸಾಗಾಣಿಕೆ ಮಾಡುವುದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿರುವುದರಿಂದ ಅನಧಿಕೃತ ಮರಳು ಸಾಗಾಣಿಕೆಯನ್ನು ನಿಲ್ಲಿಸಬೇಕೆಂದು ತಿಳಿಸುತ್ತಾ ಸರ್ಕಾರಕ್ಕೆ ಯಾವುದೇ ರೀತಿಯ ನಷ್ಟವಾಗದಂತೆ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತಾ ಸದರಿ ಯೋಜನೆಯನ್ನು ವಿರೋಧಿಸಿದರು.

**(2) ಶ್ರೀ ಹಣಮಂತ ವಾಲ್ಮಿಕಿ ಸಾ॥ ಕೋಳುರು ಎಂ. :-**

ಇವರು ಮಾತನಾಡುತ್ತಾ 22 ಎಕರೆಗಿಂತ ಹೆಚ್ಚಿಗೆ ಜಮೀನಿನಲ್ಲಿ 80ಸಾವಿರ ಟನ್ ಪ್ರಮಾಣದ ಮರಳು ಸೂಚಿತ ಸ್ಥಳದಲ್ಲಿ ಇರುವುದರ ಬಗ್ಗೆ ಖಚಿತಪಡಿಸಕೊಳ್ಳಲಾಗಿದೆಯೆ ಎಂದು ಕೇಳುತ್ತಾ ಸದರಿ ತ್ರಿಕೋನ ಯೋಜನೆಯ ನೀರಿನ ಹರಿಯುವ ದಿಕ್ಕು ಮಾಡುವ ಗಣಿಗಾರಿಕೆಯನ್ನು ಅವಲೋಕಿಸಲಾಗಿದೆಯೆ ಎಂದು ಸಭೆಗೆ ಕೇಳಿದರು.

ಈಗಾಗಲೇ ಪರವಾನಿಗೆ ಪಡೆದಿರುವಂತಹ ಕ್ವಾರಿಗಳು ನಿಯಮಗಳು ಉಲ್ಲಂಘಿಸಿರುವುದರಿಂದ ಸತ್ಯಾಗ್ರಹಗಳನ್ನು ಸಹ ಮಾಡಲಾಗಿರುತ್ತದೆ ಮತ್ತು ತ್ರಿಕೋನ ಆಕಾರದ ಯೋಜನೆಯಿಂದ ನೀರಿನ ಪ್ರವಾಹವು ಅಕ್ಕ ಪಕ್ಕದ ವ್ಯವಸಾಯ ಜಮೀನುಗಳನ್ನು ನಾಶ ಮಾಡುವುದಲ್ಲದೆ ನೀರಿನ ಒತ್ತಡದಿಂದ ಸುಮಾರು 60ಎಕೆರೆಯಷ್ಟು ಜಮೀನು ಹಾಳಾಗುತ್ತದೆ ಎಂದು ಸಭೆಗೆ ತಿಳಿಸಿದರು. ಆದ್ದರಿಂದ ಸದರಿ ಯೋಜನೆಗೆ ಅನುಮೋದನೆಯನ್ನು ನೀಡುವುದಕ್ಕಿಂತ ಮುಂಚೆ ಯೋಜನೆಯ ಸ್ಥಳದ ಸುತ್ತಮುತ್ತಲಿನ ಜಮೀನುಗಳಿಗೆ ಆಗುವ ಸಾಧಕ-ಭಾದಕಗಳನ್ನು ಪರಿಶೀಲಿಸಿಸುವಂತೆ ತಿಳಿಸುತ್ತಾ, ಮರಳು ನಿರ್ವಹಣಾ ಸಮಿತಿಯ ವಿರುದ್ಧ ನ್ಯಾಯಾಲಯದ ಮೊರೆ ಹೋಗುವುದಾಗಿ ತಿಳಿಸಿದರು. ಮರಳು ಲಭ್ಯವಿರುವ ಜಮೀನಿನ ರೈತರಿಗೆ ಅನುಕೂಲವಾದರೂ ಸಹ, ಅಕ್ಕಪಕ್ಕದ ಜಮೀನುಗಳಿಗೆ ಯೋಜನೆಯಿಂದ ಯಾವುದೇ ರೀತಿಯ ತೊಂದರೆಯಾಗಬಾರದೆಂದು ತಿಳಿಸಿದರು.

ಮುಂದುವರೆಯುತ್ತಾ ಸದರಿಯವರು ಯೋಜನೆಯ ವರದಿಯಲ್ಲಿ ತೂಕದ ಯಂತ್ರದ, ಚೆಕ್ ಪೋಸ್ಟ್‌ಗಳ ಮತ್ತು ಮಿತಿಮೀರಿದ ಮರಳು ಸಾಗಾಣಿಕೆಯ ಬಗ್ಗೆ ಯಾವುದೇ ರೀತಿಯ ಮಾಹಿತಿ ಇಲ್ಲವೆಂದು ತಿಳಿಸುತ್ತಾ ಪಕ್ಕದ ಜಿಲ್ಲೆಯಿಂದ ಆಗುತ್ತಿರುವ ಮಿತಿಮೀರಿದ ಮರಳು ಸಾಗಾಣಿಕೆಯ ಬಗ್ಗೆ ಸುಮಾರು 10ವರ್ಷಗಳಿಂದ ಮರಳು ನಿರ್ವಹಣ ಸಮಿತಿಗೆ ಮನವಿಯನ್ನು ಸಲ್ಲಿಸುತ್ತಾ ಬಂದಿದ್ದರೂ ಸಹ ಇಲ್ಲಿಯವರೆಗೂ ಯಾವುದೇ ರೀತಿಯ ಚೆಕ್ ಪೋಸ್ಟ್ ಮತ್ತು ತೂಕದ ಯಂತ್ರಗಳನ್ನು ಅಳವಡಿಸಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಪಟ್ಟಾ ಜಮೀನಿನಲ್ಲಿ ಟೆಂಡರ್ ಪಡೆಯದೇ ಮತ್ತು ಟೆಂಡರ್ ಪಡೆದಿರುವವರು ಸಹ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ. ಬೇರೆ ಕಡೆಗೆ ಇದೇ ರೀತಿ ಇರುವ ಪಾಯ್ಲೆಟ್ ರೀತಿಯ ಯಾವುದಾದರೂ ಯೋಜನೆಗಳು ಯಶಸ್ವಿಯಾಗಿರುವ ಬಗ್ಗೆ ಮಾಹಿತಿಯಿಲ್ಲವೆಂದು ತಿಳಿಸುತ್ತಾ, ಸದರಿ ಸ್ಥಳದಲ್ಲಿ 80ಸಾವಿರ ಟನ್ ಮರಳಿನ ಲಭ್ಯತೆವಿರುವ ಬಗ್ಗೆ ಅನುಮಾನ ವ್ಯಕ್ತ ಪಡಿಸಿದರು. ಸುರಪೂರ ಮತ್ತು ಇತರೆ ಕಡೆಗಳಿಂದ ಬರುವ ಮರಳು ಸಾಗಾಣಿಕೆ ವಾಹನಗಳಿಗೆ ರಾಯಲ್ಟಿ

ನೀಡುವುದರಿಂದ ಅದರ ದುರಪಯೋಗವಾಗುತ್ತದೆ ಮತ್ತು ಅಂತರ್ಜಾಲದಲ್ಲಿ ರಾಯಲ್ಟಿ ನೀಡುವುದರಿಂದ ಆಗುತ್ತಿರುವ ದುರುಪಯೋಗದ ಕುರಿತು ಮರಳು ನಿರ್ವಹಣಾ ಸಮಿತಿಯ ಅಧ್ಯಕ್ಷರು ಕ್ರಮ ತೆಗೆದುಕೊಳ್ಳದಿದ್ದರೆ ನ್ಯಾಯಾಲಯದ ಮೊರೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಬಾರದೆಂದು ತಿಳಿಸಿದರು. ಮಾಲಿನ್ಯ ನಿಯಂತ್ರಣ ಮಂಡಳಿಯು ಎಷ್ಟು ಕ್ವಾರಿಗಳಿಗೆ ಹಸಿರು ಪಟ್ಟಿಯನ್ನು ನಿರ್ಮಿಸಿದೆ ಎಂದು ಪ್ರಶ್ನಿಸುತ್ತಾ ನಮ್ಮೆಲ್ಲರನ್ನು ಈ ದಿನ ಸೇರಿಸಿರುವ ಸಭೆಯು ಉಪಯೋಗವಿಲ್ಲವೆಂದು ತಿಳಿಸಿದರು ಹಾಗೂ ಯಾವುದೇ ದಿನಪತ್ರಿಕೆಗಳಲ್ಲಿ ಮತ್ತು ಯೋಜನೆಯ ಬಗ್ಗೆ ಡಂಗುರವನ್ನು/ಟಂ-ಟಂಗಳಲ್ಲಿ ವಿಷಯವನ್ನು ಸಾರಿಲ್ಲವೆಂದು ತಿಳಿಸುತ್ತಾ ಸರ್ವೆ ನಂ. ೩೮ರ ಮಾಲೀಕರಾದ ತಮಗೆ ವಿಷಯ ಗೊತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದರು ಹಾಗೂ ಒಂದು ವೇಳೆ ಯೋಜನೆಗೆ ಅನುಮತಿಸಬಹುದಾದಲ್ಲಿ ಯಾವುದೇ ರೀತಿಯ ಉಲ್ಲಂಘನೆಗಳಾಗದಂತೆ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತಾ ಸದರಿ ಯೋಜನೆಗೆ ಸ್ಪಷ್ಟವಾಗಿ ವಿರೋದವನ್ನು ವ್ಯಕ್ತಪಡಿಸಿದರು.

(೩) **ಶ್ರೀ ಮೈಪಾಲರಡ್ಡಿ ದಳಪತಿ ಸಾ॥ ಮರಕಲ್ ಗ್ರಾಮ :-**

ಇವರು ಮಾತನಾಡುತ್ತಾ ಸದರಿ ಯೋಜನೆಯು ಲಾಭದಾಯಕವಾಗಿರುಬಹುದು ಅಥವಾ ನಷ್ಟದಾಯಕವಾಗಿದ್ದಿರ ಬಹುದಾದರು ಸಾರ್ವಜನಿಕರಿಗೆ ತೊಂದರೆಯಾಗದಂತೆ ಮತ್ತು ರಾಜ್ಯ ಹೆದ್ದಾರಿ ಸಂಖ್ಯೆ-150ರಲ್ಲಿ ಮಿತಿಮೀರಿದ ಸಾಮರ್ಥ್ಯದ ಮರಳು ಲಾರಿಗಳು ಅನೇಕ ಜೀವಗಳನ್ನು ಬಲಿಪಡೆದಿರುತ್ತವೆ ಎಂದು ತಿಳಿಸಿದರು. ಮರಳು ಲಭ್ಯವಿರುವ 22ಎಕೆರಯ ರೈತರು ಭೂಮಿ ಕಳೆದುಕೊಲ್ಲುತ್ತಿರುವ ಬಗ್ಗೆ ತಮಗೆ ಅನುಕಂಪವಿದ್ದು, ಸದರಿ ಜಾಗದಲ್ಲಿ ಯಾವುದೇ ರೀತಿಯ ಬೆಳೆಗಳು ಬೆಳೆಯುತ್ತಿಲ್ಲವಾದ್ದರಿಂದ ಬೇರೆಯವರಿಗೆ ಮರಳಿಗಾಗಿ ಜಮೀನು ನೀಡುವುದಕ್ಕೆ ತಮ್ಮ ಅಭ್ಯಂತರವಿಲ್ಲವೆಂದು ತಿಳಿಸಿದರು. ಮರಳು ಸಾಗಾಣಿಕೆ ವಾಹನಗಳು ಮಿತಿಮೀರಿದ ಪ್ರಮಾಣದಲ್ಲಿ ಮರಳನ್ನು ಸಾಗಿಸುವಾಗ ಯಾವುದೇ ರೀತಿಯ ಹೊದಿಕೆಗಳನ್ನು (ತಾಡಪಲ್) ಹೊದಿಸಿಲ್ಲದಿರುವ ಬಗ್ಗೆ ಅನೇಕ ಸಲ ಪೋಲಿಸರ ಗಮನಕ್ಕೆ ತಂದಿರುವುದಾಗಿ ತಿಳಿಸುತ್ತಾ ತಾವೇ ಖುದ್ದಾಗಿ ಮರಕಲ್ ಗ್ರಾಮದಲ್ಲಿ ಅನೇಕ ಲಾರಿಗಳನ್ನು ತಡೆದು ನಿಲ್ಲಿಸಿರುವುದಾಗಿ ತಿಳಿಸಿದರು.

ಸದರಿಯವರು ಮಾನ್ಯ ಜಿಲ್ಲಾಧಿಕಾರಿಗಳಲ್ಲಿ ವಿನಂತಿಸುತ್ತಾ, ಸುರಪುರ ಕಡೆಯಿಂದ ಬರುವ ಮರಳು ಲಾರಿಗಳು ಮರಕಲ್ ಗ್ರಾಮದ ಮಾರ್ಗವಾಗಿ ಕೋಳುರು ಕಡೆಗೆ ಸಾಗುವುದರಿಂದ ಗ್ರಾಮದ ರಸ್ತೆಯು (ಸುಮಾರು 2.5ಕೀಮಿ) ಸಂಪೂರ್ಣವಾಗಿ ಹಾಳಾಗಿದೆ ಮತ್ತು ಅಲ್ಲಿ ಯಾವುದೇ ರೀತಿಯ ಮಕ್ಕಳಿಗೆ ನಡೆದಾಡಲು ಸೌಲಭ್ಯವಿಲ್ಲದಿರುವುದರಿಂದ ದೇವದುರ್ಗದಿಂದ ಸರಪುರ ಕಡೆಗೆ ಚಲಿಸುವ ಲಾರಿಗಳು ಯಾವುದೇ ರೀತಿಯ ತಾಡಪಲ್‌ಗಳನ್ನು ಹೊದಿಸದೆ ಇರುವುದರಿಂದ ತಾಯಂದಿರು ಮಕ್ಕಳನ್ನು ಸೆರಗನ್ನು ಹೊದಗಸಿಕೊಂಡು ತಿರುಗಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಸದರಿ ಮರಳು ವ್ಯವಹಾರವು ಕೇವಲ ಹಣ ಮಾಡುವುದಷ್ಟೆವಾಗಿದೆ ಎಂದು ತಿಳಿಸುತ್ತಾ ಎಷ್ಟರ ಮಟ್ಟಿಗೆ ತೆರದ ಮರಳು ಸಾಗಾಣಿಕೆ ವಾಹನಗಳನ್ನು ನಿಯಂತ್ರಿಸಲು ಸತತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚಿಸಿದರು. ಮುಂದುವರೆಸುತ್ತಾ ದೇವದುರ್ಗ ಮತ್ತು ರಾಯಚೂರು ಜಿಲ್ಲೆಗಳಿಂದ ಮಿತಿಮೀರಿದ ಸಾಮರ್ಥ್ಯದ ಮರಳು ಸಾಗಾಣಿಕಾ ವಾಹನಗಳನ್ನು ನಿಯಮಗಳನುಸಾರ ನಿಯಂತ್ರಿಸುವಂತೆ ಕೋರುತ್ತಾ ಸದರಿ ಯೋಜನೆಯನ್ನು ವಿರೋದಿಸಿದರು.

ಒಟ್ಟಾರೆಯಾಗಿ ಮೇಲ್ಕಾಣಿಸಿದ ಸಾರ್ವಜನಿಕರು ಸದರಿ ಮರಳು ಗಣಿಗಾರಿಕೆ ಯೋಜನೆಗೆ ವಿರೋಧವನ್ನು ವ್ಯಕ್ತಪಡಿಸಿರುತ್ತಾರೆ. ಅಂತಿಮವಾಗಿ ಸಭಾಧ್ಯಕ್ಷರ ಅನುಮತಿಯೊಂದಿಗೆ ಶ್ರೀ ಸಣ್ಣವೆಂಕಟೇಶ ಸನಬಾಳ, ಪರಿಸರ ಅಧಿಕಾರಿಗಳು (ಪ್ರಭಾರ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿಯವರು ಸದರಿ ಸಭೆಯ ನಡುವಳಿಗಳನ್ನು ಯಥಾವತ್ತಾಗಿ ಬರೆದು ವಿಡಿಯೋ ಮತ್ತು ಛಾಯಾಚಿತ್ರಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಸರಕಾರಕ್ಕೆ ಸಲ್ಲಿಸಲಾಗುವುದೆಂದು ಸಭೆಗೆ ತಿಳಿಸಿದರು.

ಶ್ರೀ ಸಣ್ಣವೆಂಕಟೇಶ ಸನಬಾಳ, ಪರಿಸರ ಅಧಿಕಾರಿಗಳು (ಪ್ರಭಾರ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ ಇವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

03/04/24

(ಡಾ|| ರಾಗಪ್ರಿಯ. ಆರ್,)
ಭಾ.ಆ.ಸೇ
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಪರಿಸರ ಸಾರ್ವಜನಿಕ ಸಭೆ, ಯಾದಗಿರಿ
ತಾ|| & ಜಿ|| ಜಿಲ್ಲೆ ಯಾದಗಿರಿ.